ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 5, MAR-APR 2022, Pp. 98-103.
©IIMRD, Mysuru
IIMRD JOURNALS
www.iimrd.com

# "ಮಾಧವಿ" ಕಾದಂಬರಿಯ ಮರು ಓದು

**ಪ್ರೊ. ಆಯ್. ಪಿ. ಹೋಳಕರ*** 

*ಸಹಾಯಕ ಪ್ರಾಧ್ಯಾಪಕರು, ಆರ್.ಪಿ.ಡಿ. ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಟಿಳಕವಾಡಿ, ಬೆಳಗಾವಿ.

**ಸಾರಾಂಶ: (Abstract)**

*ರಾಮಾಯಣ ಮಹಾಭಾರತದ ಕಾಲದಿಂದಲೂ ಸಮಾಜವನ್ನು ಬಿಡದೆ ಕಾಡುತ್ತಿರುವ ಸಮಸ್ಯೆ ಎಂದರೆ ಲಿಂಗ ತಾರತಮ್ಯ. ಅದೇ ರೀತಿಯಾಗಿ ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಿಂದ ಪ್ರಸ್ತುತದವರೆಗೆ ಎಲ್ಲೆಡೆ ಕೇಳಿಬರುತ್ತಿರುವ ಕೂಗು "ಸ್ತ್ರೀ–ಪುರುಷರು ಸಮಾನರು" ಎಂಬ ಮಾತು. ಈ ವಾದ ಎಷ್ಟರ ಮಟ್ಟಿಗೆ ಸರಿಯಾಗಿದೆ ಎಂಬುದು ಗಮನಿಸಬೇಕಾದ ಅಂಶ. ಸರಕಾರವು ಸ್ತ್ರೀ–ಪುರುಷ ಲಿಂಗ ತಾರತಮ್ಯ ಹೋಗಲಾಡಿಸಲು ಅನೇಕ ಯೋಜನೆಗಳನ್ನು ಹಾಕಿಕೊಳ್ಳುತ್ತಿದೆ. ಮಹಿಳೆಯರಿಗೆ ಅನೇಕ ಮೀಸಲಾತಿಗಳನ್ನು ನೀಡುತ್ತಿದೆ. ಆದರೆ ಇದು ಎಷ್ಟರ ಮಟ್ಟಿಗೆ ಸಾಕಾರಗೊಳ್ಳುತ್ತಿದೆ ಎಂಬುವುದನ್ನು ವಿಮರ್ಶಿಸಬೇಕಾಗಿದೆ. ಸ್ತ್ರೀ–ಪುರುಷರಿಗೆ ಸಮಾನವಾದ ಸ್ಥಾನಮಾನ ದೊರೆತ್ತದ್ದೆ ಆದರೆ ಅವಳೇಕೇ ದೌರ್ಜನ್ಯ, ಅತ್ಯಾಚಾರಕ್ಕೆ ಒಳಗಾಗುತ್ತಿದ್ದಳು? ಪ್ರತಿದಿನ ಮಹಿಳೆ ಕಾಣೆಯಾಗಿದ್ದಾಳೆ, ಅತ್ಯಾಚಾರಕ್ಕೆ ಒಳಗಾಗಿದ್ದಾಳೆ, ಶೋಷಣೆಗೆ ಒಳಗಾಗಿದ್ದಾಳೆ ಎಂಬ ಮಾತುಗಳು ಸಮೂಹ ಮಾಧ್ಯಮಗಳ ಮುಖಾಂತರ ನಮ್ಮ ಕಿವಿಗೆ ಬೀಳತ್ತಲೇ ಇವೆ. ಅಷ್ಟೇ ಅಲ್ಲದೆ ಈ ಘಟನೆಗಳು ನಮ್ಮ ಸುತ್ತಮುತ್ತಲೂ ಸಂಭವಿಸುತ್ತಿವೆ. ಹೀಗಾಗಿ "ಸ್ತ್ರೀ–ಪುರುಷರು ಸಮಾನರು" ಎಂಬ ಮಾತು ಹುಸಿಯಾಗಿದೆ ಎಂದು ಅನ್ನಿಸುತ್ತಿದೆ. ಪ್ರಸ್ತುತ ಲೇಖನದಲ್ಲಿ ಡಾ. ಅನುಪಮಾ ನಿರಂಜನ ಅವರ ಮಾಧವಿ ಕಾದಂಬರಿಯನ್ನು ವಿಶ್ಲೇಷಿಸಲಾಗಿದೆ.*

**ಮುಖ್ಯಪದಗಳು (Keywords):** *ಅನುಪಮ ನಿರಂಜನ, ಮಾಧವಿ, ಸ್ತ್ರೀ ಸಮಾನತೆ.*

## ಪೀಠಿಕೆ

ಖ್ಯಾತ ಬರಹಗಾರ್ತಿ ಡಾ. ಅನುಪಮಾ ನಿರಂಜನರವರು ನಲವತ್ತೈದು ವರ್ಷಗಳ ಹಿಂದೆ ಮಹಾಭಾರತದ ಉದ್ಯೋಗ ಪರ್ವದಲ್ಲಿ ಕಂಡುಬರುವ ಮಾಧವಿಯ ಕಥೆಯನ್ನು ಕುರಿತು ಅದೇ ಹೆಸರಿನ **"ಮಾಧವಿ"** ಕಾದಂಬರಿಯನ್ನು ಬರೆದಿದ್ದಾರೆ. ಸಮಾಜವನ್ನು ಶತ ಶತಮಾನಗಳಿಂದ ಪಿಡುಗಿನಂತೆ ಕಾಡುತ್ತಿರುವ ಜಾತಿ, ಬಡತನ, ಲಿಂಗ ತಾರತಮ್ಯ ಮೊದಲಾದ ಸಮಸ್ಯೆಗಳನ್ನು ಹೋಗಲಾಡಿಸಲು ಸಮಾಜದ ಬಗ್ಗೆ ಕಳಕಳಿಯ ಭಾವವನ್ನು ಹೊಂದಿರುವ ಮನಸ್ಸುಗಳು ಸಮಾಜಿಕ ಪರಿವರ್ತನೆಗೆ ಪ್ರಯತ್ನಿಸಿವೆ. ಕೆಲವರು ದೈಹಿಕವಾಗಿ ಶ್ರಮಿಸಿದರೆ, ಇನ್ನೂ ಕೆಲವರು ಬೌದ್ಧಿಕವಾಗಿ ಸಹಕರಿಸಿದ್ದಾರೆ; ಪ್ರಾಣವನ್ನೂ ತೆತ್ತಿದ್ದಾರೆ. ಹನ್ನೆರಡನೆಯ ಶತಮಾನದಿಂದ ಅನೇಕ ವಚನಕಾರರು, ದಾಸರು, ಕೀರ್ತನಕಾರರು, ಕವಿಗಳು, ಚಿಂತಕರು, ವಿಚಾರವಾದಿಗಳು, ಶಿಕ್ಷಣ ತಜ್ಞರು, ಸಮಾಜ ಸುಧಾರಕರು, ಹೋರಾಟಗಾರರು ಲಿಂಗ

*Please cite this article as:* *ಪ್ರೊ. ಆಯ್. ಪಿ. ಹೋಳಕರ.* (2022). ಮಾಧವಿ ಕಾದಂಬರಿಯ ಮರು ಓದು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(5). ಪು.ಸಂ. 98–103.*

ಸಮಾನತೆ ತರಲು ಸತತವಾಗಿ ಪ್ರಯತ್ನಿಸುತ್ತಲೇ ಇದ್ದಾರೆ. ಆದರೆ ಈ ಸಮಸ್ಯೆಯ ನಿವಾರಣೆ ತೃಪ್ತಿಕರವಾಗಿಲ್ಲ. ಇದನ್ನು ಅನೇಕ ಸಾಹಿತ್ಯಿಕ ಮನಸ್ಸುಗಳು ತಮ್ಮ ಕಥೆ, ಕವನ, ಕಾದಂಬರಿಗಳಲ್ಲಿ ಹಿಡಿದಿಟ್ಟಿದ್ದಾರೆ. ಹೆಣ್ಣನ್ನು ರಾಮಾಯಣ ಮಹಾಭಾರತದ ಕಾಲದಿಂದಲೂ ಒಂದು ವಸ್ತುವಿನಂತೆ ಕಂಡ ಬಗೆಯನ್ನು ಪರಿವರ್ತನೆಯ ಆಶಯದಲ್ಲಿ ಯಥಾವತ್ತಾಗಿ ಚಿತ್ರಿಸಿದ್ದಾರೆ. ಅವಳನ್ನು ಕೇವಲ ಕಾಮದ ತೃಷೆ ಹಿಂಗಿಸುವ ಭೋಗದ ವಸ್ತು, ಮಕ್ಕಳನ್ನು ಹೆರುವ ಯಂತ್ರ ಎಂದು ಭಾವಿಸುತ್ತ ಬಂದ ಬಗೆಯನ್ನು ತೆರೆದಿಟ್ಟಿದ್ದಾರೆ. ಇದಕ್ಕೆ ಮಹಾಭಾರತದಲ್ಲಿ ಬರುವ ಮಾಧವಿ, ದ್ರೌಪದಿ, ಊರ್ಮಿಳೆ, ಮಂಡೋದರಿ ಮೊದಲಾದವರ ಕಥೆಗಳು, "ಮನುಸ್ಮೃತಿ"ಯಲ್ಲಿ ಮನು ಹೇಳಿದನೆಂದು ನಂಬಲಾದ "ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ" ಎಂಬ ಮಾತುಗಳು ಸಾಕ್ಷಿಯಾಗಿವೆ.

ಇಪ್ಪತ್ತನೆಯ ಶತಮಾನದಲ್ಲಿ ಹೆಣ್ಣಿನ ಶೋಷಣೆಯ ಕುರಿತು ಅರಿವು ಮೂಡಿಸುವ ಹಿನ್ನಲೆಯಲ್ಲಿ ಹುಟ್ಟಿಕೊಂಡಿರುವ ಸಾರಾ ಅಬೂಬಕರರವರ "ಚಂದ್ರಗಿರಿಯ ತೀರದಲ್ಲಿ", ತ. ರಾ. ಸು ರವರ "ಮಸಣದ ಹೂ", ನಿರಂಜನರ "ಕೊನೆಯ ಗಿರಾಕಿ", ಆನಂದರ "ನಾನು ಕೊಂದ ಹುಡುಗಿ" ಮೊದಲಾದ ಕೃತಿಗಳು ಸ್ತ್ರೀ ಶೋಷಣೆಗೆ ಕನ್ನಡಿ ಹಿಡಿದಿವೆ. ಈ ಹಿನ್ನಲೆಯಲ್ಲಿಯೇ ಅನುಪಮಾ ನಿರಂಜನರ "ಮಾಧವಿ" ಕಾದಂಬರಿ ಮೂಡಿಬಂದಿದೆ. ಇಪ್ಪತ್ತೊಂದನೆಯ ಶತಮಾನದಲ್ಲಿ ಹೆಣ್ಣಿನ ಮೇಲೆ ಹೆಚ್ಚುತ್ತಿರುವ ಅತ್ಯಾಚಾರ, ಅನ್ಯಾಯ, ದೌರ್ಜನ್ಯ, ಶೋಷಣೆಗಳು ಮಾಧವಿಯಂತಹ ಕಾದಂಬರಿಗಳನ್ನು ಮರು ಓದಿಗೆ ಒಳಪಡಿಸಿ ಲಿಂಗ ಸಮಾನತೆಗಾಗಿ ಚಿಂತಿಸುವ ಅನಿವಾರ್ಯತೆಯನ್ನು ತಂದೊಡ್ಡಿವೆ.

ಖ್ಯಾತ ಬರಹಗಾರ್ತಿ ಡಾ. ಅನುಪಮಾ ನಿರಂಜನ ಅವರು ಸುಮಾರು ನಲವತ್ತೈದು ವರ್ಷಗಳ ಹಿಂದೆ ಮಹಾಭಾರತದ ಉದ್ಯೋಗಪರ್ವದಲ್ಲಿ ಕಂಡುಬರುವ ಮಾಧವಿಯ ಕಥೆಯನ್ನು ಕುರಿತು ಅದೇ ಹೆಸರಿನ "ಮಾಧವಿ" ಕಾದಂಬರಿಯನ್ನು ಬರೆದಿದ್ದಾರೆ. ಇದರಲ್ಲಿ ಹೆಣ್ಣಿನ ಶೋಷಣೆಯ ಕುರಿತು ಚಿಂತಿಸಿ, ವೈಜ್ಞಾನಿಕವಾಗಿ ಆಲೋಚಿಸಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ವೃತ್ತಿಯಿಂದ ವೈದ್ಯರಾಗಿ ಪ್ರವೃತ್ತಿಯಿಂದ ಸಾಹಿತಿಗಳಾದ ಅನುಪಮಾ ಅವರ ಕಾದಂಬರಿಗಳಲ್ಲಿ ಪ್ರಗತಿಶೀಲ, ಬಂಡಾಯ ಮತ್ತು ನವ್ಯರ ಮನೋಧರ್ಮಗಳು ಬಿಂಬಿತವಾಗುತ್ತವೆ. ಹಾಗೂ ವೈದ್ಯಕೀಯ ಕ್ಷೇತ್ರದ ಅನುಭವ, ಮನೋವೈಜ್ಞಾನಿಕ ವಿಶ್ಲೇಷಣೆಗಳು ಕೂಡ ಇವರ ಬರವಣಿಗೆಯಲ್ಲಿ ಪ್ರಸ್ತುತವಾಗಿ ಜನಮನ್ನಣೆ ಗಳಿಸಿವೆ. ಇವರ ಕಾದಂಬರಿಗಳಲ್ಲಿ ಬಿಂಬಿತವಾಗುವ ವಸ್ತುನಿಷ್ಠತೆ, ಮನೋವೈಜ್ಞಾನಿಕ ವಿಶ್ಲೇಷಣೆ, ವೈಚಾರಿಕತೆ, ಬಂಡಾಯ ಪ್ರವೃತ್ತಿ, ಮಾನವೀಯ ಸಂಬಂಧಗಳ ನಿರೂಪಣೆ ಕಾದಂಬರಿ ಕ್ಷೇತ್ರಕ್ಕೆ ಹೊಸತನ ನೀಡಿವೆ ಎಂದರೆ ತಪ್ಪಾಗಲಾರದು.

ಅನುಪಮಾ ನಿರಂಜನರವರು ಅಪಾರ ಸಾಹಿತ್ಯ ರಾಶಿಯನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ್ದಾರೆ. ಕಥೆ, ಕವನ, ಕಾದಂಬರಿ, ಅನುವಾದ, ಪ್ರವಾಸ ಕಥನ ಮೊದಲಾದ ಕ್ಷೇತ್ರಗಳಲ್ಲಿ ಕೃಷಿ ಮಾಡಿದ್ದಾರೆ. ಅವರ ಸಾಹಿತ್ಯ ರಾಶಿಯಲ್ಲಿ ನನ್ನ ಗಮನ ಸೆಳೆದ ಕಾದಂಬರಿ "ಮಾಧವಿ". ಈ ಕಾದಂಬರಿ ಚಾರಿತ್ರಿಕವೂ, ಸಾಮಾಜಿಕವೂ, ಸಮಾನತೆಯ ವಿಚಾರ ಪ್ರಸ್ತುತವೂ ಆಗಿದೆ. ಮಹಾಭಾರತದಲ್ಲಿ ಬರುವ ಮಾಧವಿಯ ಕಥೆಯು ಒಂದು ಉಪಕಥೆ ಆಗಿದೆ. ಇಲ್ಲಿ ವಸ್ತುವಿನಂತೆ, ಪ್ರಾಣಿಯಂತೆ ವಿಕ್ರಿಯಾದ ಮುಗ್ಧ ಹೆಣ್ಣು ಮಗಳು ಮಾಧವಿಯ ಪಟ್ಟ ವ್ಯಥೆಯ ಕಥೆ ಬರುತ್ತದೆ. ಅನುಪಮಾ ನಿರಂಜನರವರು ಈ

ಕಥೆಯನ್ನೇ ತಮ್ಮ ಕಾದಂಬರಿಯ ವಸ್ತು ವಿಷಯವನ್ನಾಗಿಟ್ಟುಕೊಂಡಿದ್ದು ಸಂಕೇತಿಕವಾಗಿ ಸಾಮಾಜಿಕ ಸ್ತ್ರೀ ಅಸಮಾನತೆಯನ್ನು, ಹೆಣ್ಣಿನ ಮೇಲೆ ಬಿಡದೆ ನಡೆಯುತ್ತಿರುವ ಹೆಣ್ಣಿನ ಶೋಷಣೆಯನ್ನು ಅಭಿವ್ಯಕ್ತಿಸಿದ್ದಾರೆ. ಶತ ಶತಮಾನಗಳು ಕಳೆದರೂ ನಿಲ್ಲದ ಹೆಣ್ಣಿನ ಶೋಷಣೆ "ಮಾಧವಿ" ಕಾದಂಬರಿಯನ್ನು ಮರು ಓದುವಂತೆ ಮಾಡಿದೆ ಎನ್ನಬಹುದು.

ಕಾದಂಬರಿಯ ಒಳಹೊಕ್ಕು ನೋಡಿದರೆ ಪ್ರತಿಷ್ಠಾನ ಎಂಬ ಪುರದ ರಾಜ ಯಯಾತಿ. ಶೂರನೂ, ವೀರನೂ, ಧರ್ಮಿಷ್ಟನೂ ಅದ ರಾಜ ಯಯಾತಿಯ ಮಗಳು ಮಾಧವಿ. ರಂಬೆ, ಊರ್ವಶಿ, ಮೇನಕೆ ಮೊದಲಾದ ದೇವ ಕನ್ನಿಕೆಯರನ್ನು ಮೀರಿಸುವ ಸೌಂದರ್ಯ ಹೊತ್ತು ಹುಟ್ಟಿರುವ ಮಾಧವಿ ಹೆಣ್ಣೆಂಬ ಕಾರಣಕ್ಕೆ ಹಾಗೂ ಹುಟ್ಟಿದ ಕೆಲವು ದಿನಗಳಲ್ಲಿ ತಾಯಿ ಮಡಿದು ಹೋದ್ದರಿಂದ ಅಪಶಕುನಳು ಎಂದು ತಂದೆಯಿಂದಲೇ ತಿರಸ್ಕೃತಳಾಗುತ್ತಾಳೆ. ತಂದೆಯಿಂದ ನಿರ್ಲಕ್ಷಕ್ಕೆ ಒಳಗಾದ ಮಾಧವಿಯನ್ನು ಇವರ ಅರಮನೆಯ ದಾಸಿ ಬೆಳೆಸುತ್ತಾಳೆ. ದಾಸಿಯನ್ನು ಅವ್ವೆ ಎನ್ನುತ್ತಾ ಹೇಗೋ ಬೆಳೆದು ದೊಡ್ಡವಳಾದ ಮಾಧವಿ ತಾರುಣ್ಯಕ್ಕೆ ಬಂದಾಗ ರಾಜಕುಮಾರಿಯಾಗಿ ಸ್ವಯಂವರದಲ್ಲಿ ತನ್ನಿಚ್ಛೆಯಂತೆ ವಿವಾಹವಾಗುವ ಕನಸನ್ನು ಕಾಣುತ್ತಾಳೆ. ಆದರೆ ಹೆಣ್ಣಿಗೆ ಸ್ವಾತಂತ್ರ್ಯವಿಲ್ಲದ, ಹೆಣ್ಣನ್ನು ಮಾರಾಟದ ವಸ್ತುವಿನಂತೆ ಮನಬಂದಂತೆ ಬಳಿಸಿಕೊಳ್ಳುವ ಆ ಕಾಲದಲ್ಲಿ ರಾಜ ಯಯಾತಿ ತನ್ನ ಮಗಳು ಮಾಧವಿಯ ಕನಸಿಗೆ ಗೋರಿ ಕಟ್ಟುತ್ತಾನೆ. ಮಗಳು ತನಗೆ ಹೊರೆ, ಅಪಶಕುನ, ಇವಳು ತನಗೆ ಯಾವ ರೀತಿಯಲ್ಲೂ ಪ್ರಯೋಜನಕ್ಕೆ ಬರುವುದಿಲ್ಲ ಎಂದು ತಿಳಿದು ತನಗೆ ಬಂದ ಧರ್ಮ ಸಂಕಟದಿಂದ ಪಾರಾಗಲು ವಿಶ್ವಾಮಿತ್ರನ ಶಿಷ್ಯ ಗಾಲವನಿಗೆ ವಸ್ತಿವಿನಂತೆ ಅವಳನ್ನು ಮಾರಾಟ ಮಾಡುತ್ತಾನೆ.

ಗಾಲವ ವಿಶ್ವಾಮಿತ್ರನ ಬಳಿ ಇದ್ದು ವಿದ್ಯಾ ಪಾರಂಗತನಾಗಿ, "ಗುರುದಕ್ಷಿಣೆ ನೀವು ತೆಗೆದುಕೊಳ್ಳಲೇ ಬೇಕು" ಎಂದು ಒತ್ತಾಯ ಪಡಿಸಿದಾಗ ಮೈಯೆಲ್ಲ ಬೆಳ್ಳಗಿದ್ದು, ಒಂದು ಕಿವಿ ಮಾತ್ರ ಕಪ್ಪಗಿರುವ ಸುಮಾರು ಎಂಟುನೂರು ಕುದುರೆಗಳು ಬೇಕು ಎಂದು ಹೇಳುತ್ತಾನೆ. ಇದಕ್ಕಾಗಿ ಗುರುದಕ್ಷಿಣೆ ನೀಡಿ, ಗುರುವಿನ ಋಣ ತೀರಿಸಿ ತನ್ನ ಧ್ಯೇಯ ಪೂರ್ಣಗೊಳಿಸಿಕೊಳ್ಳಲು ಗಾಲವ ಸಹಾಯ ಅರಸುತ್ತಾ ಪ್ರತಿಷ್ಠಾನದ ರಾಜ ಯಯಾತಿ ಬಳಿ ಬರುತ್ತಾನೆ. ಗಾಲವ ಕೇಳಿದ ವಿಶೇಷ ರೀತಿಯ ಕುದುರೆಗಳು ತನ್ನ ಬಳಿ ಇಲ್ಲದ ಕಾರಣ ಸಹಾಯ ಹಸ್ತ ಚಾಚಿ ಬಂದಿರುವವರನ್ನು ಹಿಂದೆ ಕಳುಹಿಸುವುದು ರಾಜಧರ್ಮವಲ್ಲ ಎಂದು ಬಗೆದ ಯಯಾತಿ ಲೋಕೋತ್ತರವಾದ ರೂಪ ರಾಶಿಯನ್ನು ಹೊಂದಿದ ಮಗಳು ಮಾಧವಿಯನ್ನೇ ಗಾಲವನಿಗೆ ದಾನವಾಗಿ ನೀಡುತ್ತಾನೆ. ಹಾಗೂ "ಇವಳನ್ನು ಯಾವುದಾದರೂ ಒಬ್ಬ ರಾಜನಿಗೆ ಕೊಟ್ಟು, ನಿನಗೆ ಬೇಕಾದ ಕುದುರೆಗಳನ್ನು ಪಡೆದುಕೊಳ್ಳು" ಎಂದು ಹೇಳುತ್ತಾನೆ. ತನ್ನ ಧ್ಯೇಯವನ್ನು ಪೂರ್ಣಗೊಳಿಸಿಕೊಳ್ಳಲು ಗಾಲವ ಮುನಿ ಅವಳೂ ಕೂಡ ಒಂದು ಜೀವಿ, ಅವಳಿಗೂ ಕೂಡ ಭಾವನೆಗಳಿವೆ ಎಂಬುದನ್ನು ಲೆಕ್ಕಿಸದೆ ಅವಳನ್ನು ತನಗೆ ಬೇಕಾದ ಕುದುರೆಗಳಿಗಾಗಿ ಹರ್ಯಶ್ವ, ದೀವೋದಾಸ, ಉಶೀನರ ಎಂಬ ಮೂವರು ರಾಜರುಗಳಿಗೆ ಹಾಗೂ ವಿಶ್ವಾಮಿತ್ರ ಮುನಿಗೆ ಅವಳನ್ನು ಭೂಮಿಯನ್ನು ಮಾರುವಂತೆ ಮಾರಾಟಮಾಡುತ್ತಾನೆ. ಅಸ್ತಿತ್ವ ಕಳೆದುಕೊಂಡ ಮಾಧವಿ ವಸ್ತುವಿನಂತೆ ಉಪಯೋಗಿಸಲ್ಪಡುತ್ತಾಳೆ.

ಅನುಪಮಾರವರು ಕಾದಂಬರಿಯ ಮುನ್ನುಡಿಯಲ್ಲಿ ಮಹಾಭಾರತದ ಕಾಲದಲ್ಲಿ ರೂಢಿಯಲ್ಲಿದ್ದ "ನಿಯೋಗ" ಪದ್ಧತಿಯ ಕುರಿತು ಸೂಕ್ಷ್ಮವಾಗಿ ಉಲ್ಲೇಖ ಮಾಡಿದ್ದಾರೆ. "ನಿಯೋಗ" ಎಂದರೆ

ಹೆಂಡತಿಯನ್ನು ಭೂಮಿಯನ್ನಾಗಿ ಮಾಡಿ ಬೇರೊಬ್ಬ ಪುರುಷನಿಂದ ಮಕ್ಕಳನ್ನು ಪಡೆಯುವುದು ಎಂಬ ವ್ಯಾಖ್ಯಾನ ನೀಡಿದ್ದಾರೆ. ಅದು ನಿಜವೂ ಹೌದು. ಮಾಧವಿ ಕೂಡ ಆ ಮೂವರು ರಾಜರು ಹಾಗೂ ಒಬ್ಬ ಮಹರ್ಷಿಯಿಂದ ಭೂಮಿಯಂತೆ ಉಪಯೋಗಿಸಲ್ಪಟ್ಟಳು. ಮಕ್ಕಳನ್ನು ಹೆತ್ತು ಕೊಡುವ ಯಂತ್ರದಂತೆ ಬಳಸಲ್ಪಟ್ಟಳು. ಅವಳನ್ನು ಆ ನಾಲ್ವರೂ ಅಬಲೆ ಎಂದು ಹಿಂಸಿಸಿದರು. ಅವಳೊಂದಿಗೆ ಪ್ರಾಣಿಯಂತೆ ವರ್ತಿಸಿದರು. ಮಾನವೀಯತೆ ಮರೆತು ನಡೆದರು. ಮೂವರು ರಾಜರಿಗೆ ಒಂದೊಂದು ಮಗು ಹೆತ್ತು ಕೊಟ್ಟು ಕೊನೆಗೆ ವಿಶ್ವಾಮಿತ್ರನಿಗೆ ಮಾರಾಟವಾಗಿ ಅವನಿಗೂ ಕೂಡ ಒಂದು ಮಗುವನ್ನು ಹೆತ್ತು ಕೊಡುತ್ತಾಳೆ. ಈ ಮಗುವನ್ನಾದರೂ ತನ್ನ ಬಳಿ ಉಳಿಸಿಕೊಳ್ಳಬೇಕು ಎಂದು ಯೋಚಿಸಿ ವಿಶ್ವಾಮಿತ್ರನನ್ನು ಕೇಳಿದಾಗ ಅವನು ಇದಕ್ಕೆ ನಕಾರ ಭಾವ ವ್ಯಕ್ತಪಡಿಸುತ್ತಾನೆ. ಆಗ ಮಾಧವಿ, "ಈ ಮಗುವಿನ ಮೇಲೆ ನನ್ನದೇನೂ ಅಧಿಕಾವಿಲ್ಲವೇ?" ಎಂದು ಕೇಳಿದಾಗ ಅವನು, "ಇಲ್ಲ, ನೀನು ಬರೀ ಪಾತ್ರವಾಗಿದ್ದೋಳು, ಜೀವಕ್ಕೆ ಬೇರು ಮುಖ್ಯ, ಬೇರು ಬೆಳೆಯೋವರೆಗೂ ಮಣ್ಣು ಬೇಕು, ಆಮೇಲೆ ಒಂದು ಮಣ್ಣಿನಿಂದ ಇನ್ನೊಂದಕ್ಕೆ ಬದಲಾಯಿಸಿದರೂ ಬೇರು ಜೀವಂತವಾಗಿಯೇ ಇರುತ್ತೆ. ನೀನು ಬರೀ ಮಣ್ಣು, ಮಣ್ಣಿಗೆ ಚಿಗುರಿನ ಮೇಲೆ ಅಧಿಕಾರವಿಲ್ಲ!" ಎಂದು ಕಟುವಾಗಿ ನುಡಿಯುತ್ತಾನೆ. ಈ ಮಾತು ಹೆಣ್ಣಿನ ಅಸ್ತಿತ್ವಕ್ಕೆ ಶೂನ್ಯ ಮೌಲ್ಯ ಎಂಬುವುದನ್ನು ತೋರಿಸುತ್ತದೆ. ವೇದ, ಧರ್ಮ ಎಂಬುವುದು ಬರೀ ತೋರಿಕೆಯ ಮಾತಿನಲ್ಲಿ ಮಾತ್ರ ಎಂಬುವುದು ಸ್ಪಷ್ಟವಾಗುತ್ತದೆ. ಹೆಣ್ಣನ್ನು ಬಟ್ಟೆಯಂತೆ ಬದಲಿಸುವ ಪುರುಷರ ದಬ್ಬಾಳಿಕೆ ಯಾವ ರೀತಿಯಾಗಿದೆ ಎಂಬುವುದನ್ನು ಗಮನಕ್ಕೆ ತರುತ್ತದೆ.

ಮುಗ್ಧ ಹೆಣ್ಣಿನ ಭಾವನೆಗಳನ್ನು ಅರ್ಥಮಾಡಿಕೊಳ್ಳದ ಗಾಲವ ತನ್ನ ಸ್ವಾರ್ಥ ಸಾಧನೆಗೆ ಅವಳನ್ನು ಪಶುವಿನಂತೆ ಮಾರಾಟ ಮಾಡಿದ್ದು ಆಗಿನ ಕಾಲದಲ್ಲಿದ್ದ ಮಾನವೀಯ ಮೌಲ್ಯಗಳ ಕೊರತೆಯನ್ನು ಬಿಂಬಿಸುತ್ತದೆ. ಪ್ರಸ್ತುತ ಸಂದರ್ಭ ಕೂಡ ಇದಕ್ಕೆ ಹೊರತಾಗಿಲ್ಲ. ಎಲ್ಲೆಡೆ ಕೇಳಿ ಬರುತ್ತಿರುವ ಸ್ತ್ರೀ–ಪುರುಷರಲ್ಲಿ ಸಮಾನತೆ ಇರಬೇಕು ಎಂಬ ಕೂಗು ಲಿಂಗ ತಾರತಮ್ಯದ ಸಮಸ್ಯೆ ಇನ್ನೂ ತೊರೆದಿಲ್ಲ ಎಂಬುವುದನ್ನು ನೆನಪಿಸುತ್ತದೆ.

ಗಾಲವ ತನ್ನ ಧ್ಯೇಯ ಸಾಧನೆಯ ನಂತರ ಮಾಧವಿಯನ್ನು ಅವಳ ತಂದೆ ಯಯಾತಿಯ ಬಳಿ ಬಿಟ್ಟಾಗ ತನ್ನ ಕರ್ತವ್ಯ ನೆನಪಾಗಿ ಸ್ವಯಂವರ ಏರ್ಪಡಿಸಿ, "ನಿನ್ನ ಇಚ್ಛೆಯಂತೆ ಮದುವೆಯಾಗು" ಎನ್ನುತ್ತಾನೆ. ಆದರೆ ವಸ್ತುವಿನಂತೆ ಬಳಕೆಯಾದ ಮಾಧವಿ ಅದನ್ನು ತಿರಸ್ಕರಿಸಿ, ಜೀವನದ ಬಗ್ಗೆ ಜಿಗುಪ್ಸೆ ತಾಳಿ ತಪಸ್ಸಿಗೆ ನಡೆಯುತ್ತಾಳೆ.

ವಿಶೇಷವೆಂದರೆ "ಮಾಧವಿ" ಕಾದಂಬರಿಯು ಪುರಾತನ ಕಾಲದಿಂದಲೂ ಹೆಣ್ಣಿನ ಮೇಲೆ ಬಿಡದೇ ನಡೆಯುತ್ತಿರುವ ಅತ್ಯಾಚಾರ, ಅನ್ಯಾಯ, ದೌರ್ಜನ್ಯ ಮೊದಲಾದ ರೀತಿಯ ಶೋಷಣೆಯನ್ನು ಧ್ವನಿಸುತ್ತಿದೆ ಹಾಗೂ ಲಿಂಗ ತಾರತಮ್ಯದ ಕುರಿತು ಸಮಾಜವನ್ನು ಬಡಿದೆಚ್ಚರಿಸುವ ಕಾರ್ಯವನ್ನು ನಿರಂತರ ಮಾಡುತ್ತಿದೆ. ಈ ಕಾರಣದಿಂದಲೇ ಇಂದಿನ ದಿನಗಳು ಮಾಧವಿ ಕಾದಂಬರಿಯನ್ನು ಮತ್ತೆ ಮತ್ತೆ ಓದುವ ಅವಶ್ಯಕತೆಯನ್ನು ಸೃಷ್ಟಿಸಿವೆ. ಇಪ್ಪತ್ತೊಂದನೆಯ ಶತಮಾನದಲ್ಲೂ ಸಾವಿರಾರು ಮಾಧವಿಯರು ನಮ್ಮ ನಡುವೆ ಇದ್ದಾರೆ. ಅದೆಷ್ಟೋ ಮುಗ್ಧ ಹೆಣ್ಣು ಜೀವಗಳು ಪುರುಷನ ಕಾಮದ ಅಟ್ಟಹಾಸ, ದರ್ಪ, ಅಧಿಕಾರ, ದೌರ್ಜನ್ಯಕ್ಕೆ ಬಲಿಯಾಗುತ್ತಿವೆ ಎಂಬ ಸತ್ಯಾಂಶದ ಕುರಿತು ಆಲೋಚಿಸುವಂತೆ "ಮಾಧವಿ" ಕಾದಂಬರಿ

ಮಾಡುತ್ತದೆ. ಪುರಾತನ ಯುಗದಲ್ಲಿ ನಡೆದು ಹೋದ ಮಾಧವಿ ಕಥೆ ವರ್ತಮಾನದಲ್ಲಿ ಸ್ತ್ರೀ ಸ್ಥಾನಮಾನದ ಕುರಿತು ಚಿಂತನೆಗೆ ಒಡ್ಡಿ ಎಚ್ಚರಿಸುವಂತೆ ಮಾಡಿದೆ. ಇಂದಿಗೂ ಕೂಡ ಹೆಣ್ಣು ಮಕ್ಕಳ ಮಾರಾಟ ನಡೆದೇ ಇದೆ. ಹೆಣ್ಣು ಭ್ರೂಣ ಹತ್ಯೆ ಕೂಡ ತಪ್ಪಿಲ್ಲ. ಒಂದು ಅಂದಾಜಿನಂತೆ ಪ್ರಸ್ತುತ ಲಿಂಗಾನುಪಾತ ಪ್ರತಿ 1000 ಪುರುಷರಿಗೆ 945 ಸ್ತ್ರೀಯರಿದ್ದಾರೆ. ಹೀಗಾಗಿ ಹೆಣ್ಣುಗಳ ಕೊರತೆಯಿದ್ದ ಪ್ರದೇಶಗಳಲ್ಲಿ ದುಡ್ಡು ಕೊಟ್ಟು ಅವಳನ್ನು ವಸ್ತುವಿನಂತೆ ಕೊಂಡುಕೊಳ್ಳುತ್ತಿದ್ದಾರೆ. ಗಂಡು–ಹೆಣ್ಣಿನಲ್ಲಿ ಕಾಮ ನಿಸರ್ಗ ಸಹಜ ಭಾವ. ಆದರೆ ಅದು ಬಾಳಿಗೆ ಹಿತವಾಗಿರಬೇಕು, ಅತಿಯಾಗಿರಬಾರದು. ಇನ್ನೊಬ್ಬರನ್ನು ಹಿಂಸಿಸುವ ರೀತಿಯಲ್ಲಂತೂ ಇರಲೇ ಇರಬಾರದು. ಅತಿಯಾದರೆ ಅಮೃತವೂ ವಿಷವಾಗುತ್ತದೆ.

ಇವತ್ತಿನ ಸಂದರ್ಭದಲ್ಲಿಯೂ ಕೂಡ ಮಾಧವಿಯಂತೆ ಒಂದು ಹೆಣ್ಣು ನಾನಾ ಪುರುಷರಿಗೆ ಮಾರಾಟವಾಗುತ್ತಿದ್ದಾಳೆ. ಹೆಣ್ಣು–ಗಂಡು ಸಮಾನರು ಎಂದು ಬೀಗುತ್ತಿರುವ ನಮ್ಮವರಲ್ಲಿ ಎಷ್ಟು ಜನ ತಂದೆ–ತಾಯಿಗಳು ಹೆಣ್ಣು ಮಕ್ಕಳಿಗೆ ಅವರು ಬಯಸಿದ ಹುಡುಗನ ಜೊತೆ ಮದುವೆ ಮಾಡಿ ಕೊಡುತ್ತಿದ್ದಾರೆ? ಅವರಿಚ್ಛೆಯಂತೆ ಮಾಡುತ್ತಿದ್ದಾರೆ? ಎಂಬುದು ವಿಮರ್ಶೆಯ ವಿಷಯವೇ ಆಗಿದೆ. ಕೇವಲ ಬೆರಳೆಣಿಕೆಯಷ್ಟು ಮಾತ್ರ ಪರಿವರ್ತಿತರಾಗಿದ್ದಾರೆ, ಉಳಿದವರು ಅವರ ಕನಸಿನ ಗೋಪುರವನ್ನು ನಾಶ ಮಾಡಿ ತಮ್ಮಿಚ್ಛೆಯಂತೆ ನಡೆದುಕೊಳ್ಳುತ್ತಿದ್ದಾರೆ ಮತ್ತು ತಮ್ಮ ಪ್ರತಿಷ್ಠೆಯನ್ನು ಮೆರೆಯುತ್ತಿದ್ದಾರೆ. ದಾಂಪತ್ಯದಲ್ಲಿ ವಿರಸ ಉಂಟಾಗಿ ವಿವಾಹ ವಿಚ್ಛೇದನವಾಗಿ ತವರು ಮನೆಗೆ ಬಂದರೆ ಮಗಳು ಭಾರವಾಗಿ ಹೆಣ್ಣು ಮಕ್ಕಳು ಕಡಿಮೆ ಇರುವ ಪ್ರದೇಶಗಳಿಗೆ ಮಾರಾಟ ಮಾಡುತ್ತಾರೆ.

ಹೀಗೆ ಮಾರಾಟಗೊಂಡ ಅವಳು ಭೋಗದ ವಸ್ತುವಾಗುತ್ತಾಳೆ. ಮಾನವೀಯ ಸಂಬಂಧಗಳನ್ನು ಮರೆತು ಪಶುವಿನಂತೆ ವರ್ತಿಸಿ ಮನೆಯ ಎಲ್ಲ ಪುರುಷರ ಕಾಮ ತೃಷೆಯನ್ನು ಅವಳಿಂದ ನೀಗಿಸುತ್ತಾರೆ. ಇದು ನಾನು ಕಂಡ ಒಂದು ಘಟನೆ ಅಷ್ಟೇ. ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಕಾರಣಗಳಿಗಾಗಿ, ಬೇರೆ ಬೇರೆ ರೀತಿಯಿಂದ ಹೆಣ್ಣು ಮಕ್ಕಳ ಶೋಷಣೆ ನಡೆಯುತ್ತಿದೆ. ಕೆಲವು ಪರದೆಯ ಮುಂದೆ, ಇನ್ನೂ ಕೆಲವು ಪರದೆಯ ಹಿಂದೆ. ಪುರುಷರ ಕಾಮ, ದರ್ಪ, ಅಧಿಕಾರ, ಅನ್ಯಾಯ, ಅತ್ಯಾಚಾರಕ್ಕೆ ಹೆಣ್ಣು ಮೌನವಾಗಿ ಬಲಿಯಾಗುತ್ತಿದ್ದಾಳೆ. ಇಂತಹ ದೃಶ್ಯಗಳು ಎಂತವರ ಮನಸ್ಸಿನಲ್ಲೂ ಜ್ವಾಲಾಮುಖಿ ಹುಟ್ಟಿಸದೆ ಇರಲಾರದು. **"ಹೆಣ್ಣು–ಗಂಡು ಸಮಾನರು"** ಎಂಬ ಭಾವ ಮೂಡಿದ್ದೆ ಆದರೆ ಇಂತಹ ದೃಶ್ಯಗಳೇಕೇ ನಮ್ಮ ಕಣ್ಣ ಮುಂದೆ? ಮಹಾಭಾರತ ರಾಮಾಯಣ ಮುಗಿಯಲಿಲ್ಲ ನಡೆದೇ ಇದೆ ಎಂಬ ವಾಸ್ತವ ಸತ್ಯವನ್ನು ವರ್ತಮಾನದಲ್ಲಿ ಲಿಂಗ ತಾರತಮ್ಯದ ಸಮಸ್ಯೆ ಜ್ಞಾಪಿಸುತ್ತಿದೆ.

ಪ್ರಕೃತಿಯಲ್ಲಿರುವ ಪ್ರತಿಯೊಂದು ಜೀವಿಗೂ ಬದುಕುವ, ತನ್ನಿಚ್ಛೆಯಂತೆ ಬಾಳುವ ಹಕ್ಕಿದೆ. ಈ ಹಕ್ಕನ್ನು ಹತ್ತಿಕ್ಕುವವನು ಪಶುಗಿಂತ ಕಡೆ ಎಂಬುವುದನ್ನು ಅರಿಯಬೇಕಿದೆ. ಹೆಣ್ಣು ಬರೀ ಭೋಗದ ವಸ್ತುವಲ್ಲ, ಯಂತ್ರವಲ್ಲ, ಅವಳೂ ಒಂದು ಜೀವಿ. ಅವಳಿಗೂ ಮನಸ್ಸಿದೆ. ಆ ಮನಸ್ಸಿನ ತುಂಬ ಸುಂದರ ಭಾವಗಳಿವೆ, ಕನಸುಗಳಿವೆ. ಹೆಣ್ಣು–ಗಂಡು ಕೇವಲ ಸ್ವರೂಪದಲ್ಲಿ ಭಿನ್ನ ಆತ್ಮ ಒಂದೇ ಎಂಬುವುದನ್ನು ಸರ್ವರೂ ಅರಿಯುವ ಅನಿವಾರ್ಯತೆ ಇದೆ. ಈ ಸಂದರ್ಭದಲ್ಲಿ ದೇವರ ದಾಸಿಮಯ್ಯನ ವಚನದ ಸಾಲುಗಳು ನೆನಪಾಗುತ್ತಿವೆ.

***ಮೊಲೆ ಮೂಡಿ ಬಂದರೆ ಹೆಣ್ಣೆಂಬರು***

***ಗಡ್ಡ,ಮೀಸೆ ಬಂದರೆ ಗಂಡೆಂಬರು***

***ನಡುವೆ ಸುಳಿವಾತ್ಮನು***

***ಗಂಡು ಅಲ್ಲ, ಹೆಣ್ಣೂ ಅಲ್ಲ ಕಾಣಾ ರಾಮನಾಥ*** [1] (ದೇವರ ದಾಸಿಮಯ್ಯ)

ಈ ಹಿನ್ನಲೆಯಲ್ಲಿಯೇ ಅಲ್ಲಮಪ್ರಭುವಿನ ವಚನದ ಸಾಲೊಂದು ನೆನಪಾಗುತ್ತದೆ,,,,

***ಹೊನ್ನು ಮಾಯೆ ಎಂಬರು, ಹೊನ್ನು ಮಾಯೆಯಲ್ಲ,***

***ಹೆಣ್ಣು ಮಾಯೆ ಎಂಬರು, ಹೆಣ್ಣು ಮಾಯೆಯಲ್ಲ,***

***ಮಣ್ಣು ಮಾಯೆ ಎಂಬರು, ಮಣ್ಣು ಮಾಯೆಯಲ್ಲ,***

***ಮನದ ಮುಂದಣ ಆಸೆಯೆ ಮಾಯೆ ಕಾಣಾ ಗುಹೇಶ್ವರ.*** [2] (ಅಲ್ಲಮಪ್ರಭು)

ಹೆಣ್ಣು ತಾನು ಅಬಲೆಯಲ್ಲ, ಸಬಲೆಯೆಂದು ತಿಳಿಯಬೇಕು. ಹೆಣ್ಣು ತನ್ನ ಹಕ್ಕು, ಅಧಿಕಾರಕ್ಕಾಗಿ ಯಾರನ್ನೂ ಕೇಳಬೇಕಾಗಿಲ್ಲ. ಸ್ವತಃ ಪಡೆದುಕೊಳ್ಳಬೇಕು. ಯಾರಿಗೆ ಯಾರೂ ಹಕ್ಕನ್ನಾಗಲಿ, ಅಧಿಕಾರವನ್ನಾಗಲಿ ಕೊಡುವುದಿಲ್ಲ, ಅವೂಗಳನ್ನು ನಾವು ಸೃಷ್ಟಿಸಿ ಪಡೆದುಕೊಳ್ಳಬೇಕು. ಹೆಣ್ಣು ಮಕ್ಕಳು ಇನ್ನೂ ಹೆಚ್ಚು ಶಿಕ್ಷಿತರಾಗಬೇಕು. ಹೀಗಾದಾಗ ಮಾತ್ರ ಅವಳು ಸಮಾಜವನ್ನು ಗುರುತಿಸಬಲ್ಲಳು, ತನ್ನ ಅನ್ಯಾಯದ ವಿರುದ್ಧ ಧ್ವನಿಯೆತ್ತಬಲ್ಲಳು. ಮಾಧವಿಯಂತೆ ತನ್ನ ಬದುಕನ್ನು ಬಲಿ ಕೊಡದೆ ಜೀವನವನ್ನು ತನ್ನ ಇಚ್ಛೆಯಂತೆ ಸುಂದರವಾಗಿ ನಡೆಸಬಲ್ಲಳು.

**ಉಪಸಂಹಾರ**

ಪ್ರಸ್ತುತ ದಿನಮಾನಗಳಲ್ಲಿ ಲಿಂಗ ತಾರತಮ್ಯದ ಕುರಿತು ಅರಿವನ್ನು ಮೂಡಿಸಿಕೊಂಡು ಸುಂದರ ಬದುಕಿನ ಗೋಪುರ ಕಟ್ಟಿಕೊಳ್ಳಬೇಕಾದರೆ "ಮಾಧವಿ"ಯಂತಹ ಕಾದಂಬರಿಯ ಓದು ಅನಿವಾರ್ಯ ಎಂಬ ಅಂಶ ಮನದಟ್ಟಾಗುತ್ತದೆ.

**ಅಡಿ ಟಿಪ್ಪಣಿ**

1. ದೇವಿರಪ್ಪ. ಎಚ್. ಜೇಡರ ದಾಸಿಮಯ್ಯನ ವಚನಗಳು. (ಪು.ಸಂ.–37)
2. ಮಲ್ಲಾಪುರ ಬಿ. ವಿ. ಅಲ್ಲಮಪ್ರಭುದೇವರ ವಚನ ಸಂಪುಟ" (ಪು.ಸಂ –25)

**ಪರಾಮರ್ಶನ/ಆಕರ ಗ್ರಂಥಗಳು**


- ಅನುಪಮಾ ನಿರಂಜನ (2013). ಮಾಧವಿ. ಡಿ,ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.
- ದೇವಿರಪ್ಪ. ಎಚ್. (1986). ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ.
- ಮಲ್ಲಾಪುರ. ಬಿ. ವಿ. (1993). ಅಲ್ಲಮಪ್ರಭುದೇವರ ವಚನ ಸಂಪುಟ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.